# ಯಕ್ಷರಂಗದ ಪೂರ್ಣ ಚಂದ್ರ

(8ನೇ ಪುಟದಿಂದ)

ಇತರರು ಮಾಡಲಾರರೇನೋ.. ಅವರ ಪ್ರಭಾವ ಚಿಟ್ಟಾಣಿಯವರ ಮೇಲಿರುವುದನ್ನು ನಾವು ಕಾಣುತ್ತೇವೆ. ಗದಾಯುದ್ಧದ ಕೌರವ ಪೂರ್ಣತಃ ಶಿವರಾಮ ಹೆಗಡೆಯವರ ಅನುಕರಣೆ. ಕರ್ಕಿ ಪರಮಯ್ಯ ಹಾಸ್ಯಗಾರರ ಪರಂಪರೆಯ ನೃತ್ಯವೈವಿಧ್ಯ, ಕೊಂಡದ ಕುಳಿ ರಾಮಹೆಗಡೆ, ಲಕ್ಷ್ಮಣ ಹೆಗಡೆಯವರ ಕಣ್ಣ ಮಿಂಚು ಹಾಗೂ ದೇವರು ನಾರಾಯಣ ಹೆಗಡೆಯವರ ಪಾತ್ರ ತನ್ಮಯತೆಯನ್ನು ಕಂಡರು. ಹೀಗಾಗಿ ಚಿಟ್ಟಾಣಿಯವರು ಎಲ್ಲರ ಪ್ರಭಾವಕ್ಕೂ ಒಳಗಾದರು. ಎಲ್ಲರಿಂದಲೂ ಒಳ್ಳೆಯದನ್ನು ಸ್ವೀಕಾರ ಮಾಡಿದರು.

ಎಲ್ಲ ಹಿರಿಯಂದಿರು ಮೆರೆದಾಡಿದ ರಂಗದಲ್ಲಿ ಚಿಟ್ಟಾಣಿ ಮೆರೆದಾಡಿದರು. ಪರಂಪರೆಯ ಹಿರಿಯ ಕಲಾವಿದರೆಲ್ಲರ ಸತ್ವ–ಕ್ರಿಯಾಶೀಲತೆ ಚಿಟ್ಟಾಣಿಯವರಲ್ಲಿ ಮೇಳೈಸಿರುವು ಮಾತ್ರವಲ್ಲ, ಜೊತೆಯಲ್ಲಿ ಅಭೂತಪೂರ್ವವಾದ ಅಭಿಜಾತ ಪ್ರತಿಭೆ ಇವರನ್ನು ಈ ಎತ್ತರಕ್ಕೆ ಕೊಂಡೊಯ್ದಿತು. ಚಿಟ್ಟಾಣಿ ಬೆಳಕಿಗೆ ಬಂದುದೇ ಕಲಾಧರನ ಪಾತ್ರದ ಮೂಲಕ. ಚಿಟ್ಟಾಣಿಯವರಿಗಾಗಿಯೇ ಕಡತೋಕ ಮಂಜುನಾಥ ಭಾಗವತರು 'ಕಾಳಿದಾಸ ಪ್ರಸಂಗ' ಬರೆದು ಚಿಟ್ಟಾಣಿಯವರನ್ನು ಕುಣಿಸಿದರು. ಶೃಂಗಾರರಸದ ಅಭಿವ್ಯಕ್ತಿಯ ಅಭಿನಯದಿಂದ ಚಿಟ್ಟಾಣಿ ಕಲಾಧರ ಹೆಗಡೆಯಾದರು.

ಚಿಟ್ಟಾಣಿಯವರ ಲಯಸಿದ್ಧಿ ನೃತ್ಯದ ಲಯದಲ್ಲಿ ಮಾತ್ರವಲ್ಲ; ಅದು ಪಾತ್ರಗಳ ಶೀಲ ಸ್ವಭಾವಗಳ ಲಯವೂ ಹೌದು. ಬಹುಶಃ ಅವರು ರಂಗದಲ್ಲಿ ತೋರುವಷ್ಟು ಸಾಂಪ್ರದಾಯಿಕ ನೃತ್ಯವನ್ನು ಬೇರಾರೂ ತೋರಲಿಲ್ಲ. ಸಾಂಪ್ರದಾಯಿಕ ಕುಣಿತದೊಂದಿಗೆ ಹೊಸ ಕುಣಿತವನ್ನೂ ರಂಗಕ್ಕೆ ನೀಡಿದರು. ಅದಿಂದು ಚಿಟ್ಟಾಣಿ ಕುಣಿತವೆಂದೇ ಕರೆಸಿಕೊಳ್ಳುವಷ್ಟು ಪ್ರಸಿದ್ಧಿಯಾಗಿದೆ. ಜತೆಗೆ ಅಪೂರ್ವವೆನಿಸುವ ರಸಾಭಿವ್ಯಕ್ತಿ, ಭಾವಾಭಿವ್ಯಕ್ತಿಯ ಕಲಾವಿದರಿವರು. ಶೃಂಗಾರ, ಕರುಣ, ರೌದ್ರ, ಅದ್ಭುತ ರಸಭಾವದಲ್ಲಿ ಮೈಮರೆತು ಮೈಮರೆಸಬಲ್ಲ ಕಲಾ ಛಾತಿ ಅವರದ್ದು. ಸಾತ್ವಿಕ ಶೃಂಗಾರ, ತಾಮಸ ಶೃಂಗಾರ, ರಾಜಸ ಶೃಂಗಾರಗಳಲ್ಲೂ ಮಿಂಚಿದ್ದಾರೆ. ಅಂತೆಯೇ ಗದಾಯುದ್ಧದ ಕೌರವನಾಗಿ ಕರುಣೆಗೆ ಪಾತ್ರರಾಗಿದ್ದಾರೆ. ಅವರ ಭಸ್ಮಾಸುರ, ರುದ್ರಕೋಪ ರೌದ್ರರಸದ ಪ್ರತೀಕಗಳು. ಆ ಪಾತ್ರ ಪ್ರವೇಶದಲ್ಲೇ ಪ್ರೇಕ್ಷಕರನ್ನು ರಸ ರೋಮಾಂಚನಗೊಳಿಸಿದ ಪ್ರತಿಭೆ ಅವರದ್ದು.

ಚಿಟ್ಟಾಣಿ ಅಭಿನಯದಲ್ಲಿ ಸಾವಿರ ಮಾತು ಹೇಳದ್ದನ್ನು ಒಂದು ನೋಟದಿಂದ, ನಿಶ್ಚಲ ಭಂಗಿಯಿಂದ, ಹ್ಞುಂ ಕಾರದಿಂದ, ನಗುವಿನಿಂದ ತೋರಿಸಬಲ್ಲವರಾಗಿದ್ದರು. ಪ್ರಖರ ವಾಗ್ಮಿಯಲ್ಲದಿದ್ದರೂ ಹೇಳುವ ಮಾತಿಗೆ ಅಭಿನಯದ ಮೂಲಕ ಜೀವ ತುಂಬಬಲ್ಲ ಅಪೂರ್ವ ಕಲಾವಿದ.

ಯಕ್ಷಗಾನದಲ್ಲಿ ಅನೇಕ ಹೆಸರಾಂತ ಕಲಾವಿದರಿದ್ದಾರೆ. ಅವರ ಪಾತ್ರ ಚೆನ್ನಾಗಿ ಬರಬೇಕಿದ್ದರೆ ಪ್ರೇಕ್ಷಕರು ತುಂಬಿರಬೇಕು; ತಮಗೆ ಬೇಕಾದವರು ಮುಂದೆ ಕುಳಿತಿರಬೇಕು; ಮಾನಸಿಕ ಪ್ರಸನ್ನತೆ ಬೇಕು! ಆದರೆ ಚಿಟ್ಟಾಣಿಯವರಿಗೆ ಮಾತ್ರ ನೂರು ಜನರಿದ್ದರೂ ಒಂದೇ ಸಾವಿರ ಜನರಿದ್ದರೂ ಒಂದೇ. ಪರಿಚಿತರಿದ್ದರೂ, ಅಪರಿಚಿತರಿದ್ದರೂ ಒಂದೇ. ರಂಗದ ಮೇಲೆ ಎಷ್ಟು ತನ್ಮಯತೆಯಿಂದ ಕೆಲಸ ಮಾಡಬೇಕೋ ಅಷ್ಟನ್ನು ಮಾಡಿಯೇ ತನ್ನತನವನ್ನು ಮೆರೆಸಿದವರು.

ಚಿಟ್ಟಾಣಿಯವರು ಶಾಸ್ತ್ರೀಯವಾದ ಹಸ್ತಾಭಿನಯ ಮಾಡುತ್ತಾರೆ. ಆದರೆ ಅವರಿಗೆ ಯಾವುದರ ಹೆಸರೂ ಗೊತ್ತಿಲ್ಲ. ನೋಡಿ ಕಲಿತಿದ್ದು ಕೆಲವಾದರೆ ಆಯಾ ಸನ್ನಿವೇಶದಲ್ಲಿ ತಾನಾಗಿ ಪ್ರಕಟಗೊಂಡವು ಕೆಲವು. ಇದು ನಿಜಕ್ಕೂ ಅಚ್ಚರಿಯ ಸಂಗತಿ. ಅವರು ಪರಂಪರೆಯ ನೃತ್ಯ ಮಾಡಿ ತೋರಿಸಿದರು. ಆದರೆ ಅದರ ಬಗೆಗೆ ಉಪನ್ಯಾಸ ಮಾಡಲಿಲ್ಲ. ಅದಕ್ಕೆ ಅವರ ಓದು ಸಾಲದಾಗಿತ್ತು.

ಯಕ್ಷಗಾನದ ತಿರುಗಾಟದ ಮೇಳಗಳಲ್ಲಿ ಚಿಟ್ಟಾಣಿ ಇಲ್ಲವೆಂದರೆ ಆ ದಿನದ ಆಟದಲ್ಲಿ ಗಲ್ಲಾಪೆಟ್ಟಿಗೆ ತುಂಬುವುದಿಲ್ಲ. ಜನ ತುಂಬುವುದಿಲ್ಲ ಎಂದೇ ಆಗ ಅರ್ಥೈಸಲಾಗುತ್ತಿತ್ತು. ಇದು ಅವರು ಕಂಡ ಯಶಸ್ಸಿಗೆ ಸಾಕ್ಷಿಯಾಗಿತ್ತು. ಅವರ ರಂಗ ಪ್ರೀತಿ ಅನನ್ಯವಾದುದು. ಸಹಕಲಾವಿದರನ್ನು ನೋಡುವ ದೃಷ್ಟಿ ಆತ್ಮೀಯವಾದುದು. ರಂಗದಲ್ಲಿ ಯಾರನ್ನೂ ತೇಜೋವಧೆ ಮಾಡಿಲ್ಲ. ಅವರ ಜೊತೆ ಯಾರೂ ಪಾತ್ರ ಮಾಡಬಹುದಾಗಿತ್ತು. ಹಿರಿಯರಿಗೆ ಗೌರವ ತೋರಿ ಕಿರಿಯರಿಗೆ ಪ್ರೋತ್ಸಾಹ ನೀಡುವ ಹೃದಯವಂತಿಕೆ ಅವರಲ್ಲಿತ್ತು. ಹಾಗೆಯೇ ಅಹಂಕಾರಿಗಳ ಬಗೆಗೆ ಅವರದ್ದು ನಿರ್ಲಿಪ್ತ ಧೋರಣೆ.





ಚಿಟ್ಟಾಣಿಯವರ ಶರೀರವೇ ಶಿಲ್ಪಸದೃಶವಾದುದು. ಆ ದೇಹಕ್ಕೆ ಯಾವ ಪಾತ್ರವೂ ಒಪ್ಪುತ್ತದೆ. ಖಳನಾಯಕ ಹೇಗೋ ನಾಯಕನೂ ಹಾಗೇ. ಅವರ ಕಲಾ ಪರಂಪರೆಯನ್ನು ಪುತ್ರರಾದ ಸುಬ್ರಹ್ಮಣ್ಯ ಚಿಟ್ಟಾಣಿ, ನರಸಿಂಹ ಚಿಟ್ಟಾಣಿ ಹಾಗೂ ಮೊಮ್ಮಗನಾದ ಕಾರ್ತಿಕ ಚಿಟ್ಟಾಣಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಚಿಟ್ಟಾಣಿಯವರ ತುಂಬು ಸಹಕಾರದೊಂದಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ 'ರಂಗ ಸಂಕಥನಕಾರ ಚಿಟ್ಟಾಣಿ ರಾಮಚಂದ್ರ ಹೆಗಡೆ: ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಡಾಕ್ಟರ್ ಆಫ್ ಲಿಟರೇಚರ್ ಪದವಿ ಲಭಿಸಿದ್ದು ನನ್ನ ಭಾಗ್ಯ.

ಗದುಗಿನ ಕಲಾಚೇತನ ಅಕಾಡೆಮಿಯ ಅಭಿನಯಶ್ರೀ ಪ್ರಶಸ್ತಿಯಿಂದ ಹಿಡಿದು ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿವರೆಗೆ ನೂರಾರು ಪ್ರಶಸ್ತಿಗಳ ಪುರಸ್ಕೃತರಾದ ಚಿಟ್ಟಾಣಿಯವರು ಸಮಕಾಲೀನ ಯಕ್ಷಗಾನ ರಂಗದ ನಟಸಾರ್ವಭೌಮರು. ಪಾತ್ರವನ್ನು ಪಾತ್ರವಾಗಿಯೇ ಕಟೆದು ನಿಲ್ಲಿಸಿದ, ಆ ಮೂಲಕ ಸಹೃದಯರನ್ನು ಕಲಾಪ್ರಪಂಚದಲ್ಲಿ ವಿಹರಿಸುವಂತೆ ಮಾಡಿದ, ಲೌಕಿಕಕ್ಕೆ ಅಲೌಕಿಕ ಭವ್ಯತೆ ತಂದಿತ್ತ ಹೆಸರೇ ಚಿಟ್ಟಾಣಿ.